**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 8/2023**

| | | |
|---|---|---|
| **ಸಾಕ್ಷಿದಾರನ ಹೆಸರು** | : ಕನಕರಾಜು | ಪಿ.ಡಬ್ಲ್ಯೂ–5 |
| **ತಂದೆಯ ಹೆಸರು** | : ಲೇಟ್ ಚಿಕ್ಕಣ್ಣ | ಸಿ.ಡಬ್ಲ್ಯೂ– 11 |
| **ವಯಸ್ಸು** | : 63 ವರ್ಷ | |
| **ಉದ್ಯೋಗ** | : ವ್ಯವಸಾಯ | |
| **ವಾಸಸ್ಥಳ** | : ಹೊಸಹಳ್ಳಿ | |

**ಸಾಕ್ಷಿಯನ್ನು ಈ ದಿನ ದಿಃ05.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು ದಾಖಲೆಗೆ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಶಾನೆ ಪಿ–9 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–9(ಎ) ಎಂದು ಗುರುತಿಸಲಾಯಿತು. 2020 ನೇ ಇಸವಿಯಲ್ಲಿ ನಾನು ಬೆಲವತ್ತಾಗೆ ಹೋಗುತ್ತಿರುವಾಗ, ಬೆಲವತ್ತಾ ರಸ್ತೆಯ ಪಕ್ಕದಲ್ಲಿ ಒಂದು ಹೊಟೆಲ್ ಇದ್ದು, ಅಲ್ಲಿ ಪೊಲೀಸರು ಇದ್ದರು. ನಾನು ಹೋಗುತ್ತಿರುವಾಗ ಅವರು ನನ್ನನ್ನು ನಿಲ್ಲಿಸಿ ಸಹಿ ಹಾಕಲು ಹೇಳಿದ್ದು, ದಾಖಲೆಗೆ ಸಹಿ ಹಾಕಿರುತ್ತೇನೆ. ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ತಿಳಿದಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

**2.** ಸಾಕ್ಷಿಗೆ ಪೋಟೋಗಳನ್ನು ತೋರಿಸಿ ಗುರುತಿಸಲು ಕೇಳಿದಾಗ ಸಾಕ್ಷಿಯು ತನ್ನನ್ನು ನೋಡಿ ಗುರುತಿಸಿದ್ದು, ಸದರಿ 3 ಪೋಟೋಗಳನ್ನು ನಿಶಾನೆ ಪಿ–10 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**3.** ನಾನು ಹೋಗುತ್ತಿರುವಾಗ ಬೆಲವತ್ತಾ ರಸ್ತೆಯಲ್ಲಿ ನಿಂತಿದ್ದೆ ಎಂದು ಹೇಳಿದ ಹೋಟೆಲಿನ ಹೆಸರು ಲಕ್ಷ್ಮೀ ಹೋಟೆಲ್ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪೊಲೀಸರು ಸ್ಥಳದಲ್ಲಿ ಚಾ.ಸಾಃ13 ಚಂದನ್ ರವರನ್ನು ಕರೆಸಿ ಅಲ್ಲಿ ಹೋಟೇಲಿನಲ್ಲಿದ್ದ ಸಿಸಿಟಿವಿಯಲ್ಲಿಯ ದೃಶ್ಯಾವಳಿಗಳನ್ನು ಚಾ.ಸಾಃ13 ರವರು ಪರಿಶೀಲನೆ ಮಾಡಿ ತೆಗೆದಿದ್ದು, ನನ್ನ ಸಮಕ್ಷಮ ಸದರಿ ದೃಶ್ಯಾವಳಿಗಳನ್ನು ಟಿವಿಗೆ ಹಾಕಿ ತೋರಿಸಿದ್ದು, ನಂತರ ಅದನ್ನು ಕಾಪಿ ಮಾಡಿ, ಪೆನ್ ಡ್ರೈವ್ ಗೆ ಹಾಕಿ ನನ್ನ ಸಮಕ್ಷಮ ಅಮಾನತ್ತುಪಡಿಸಿ–ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋಗಳನ್ನು ತೋರಿಸಿ ಹೋಟೆಲಿನಲ್ಲಿ ಅವುಗಳನ್ನು ಪಡೆದುಕೊಳ್ಳಲಾಗುತ್ತಿದೆ ಎಂದರೆ ಸರಿ. ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಮಹಜರಿಗೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ:– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**